**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

**ಕುಮಟಾ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 613/2013**

ಫಿರ್ಯಾದಿ .... ಕನಾಟಕ ಸರ್ಕಾರ

ವಿರುದ್ಧ

ಆರೋಪಿ ...ಶ್ರೀಮತಿ ನಾಗವೇಣಿ ಕಾಮೇಶ್ವರ ಅಂಬಿಗ

**ದೋಷಾರೊಪಣೆ**

ಶ್ರೀ ನರೇಂದ್ರ ಬಿ. ಆರ್, ಬಿ.ಎಸ್.ಸಿ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ

ನಾನು ನಿಮ್ಮ ಅಂದರೆ –

1. ಶ್ರೀಮತಿ ನಾಗವೇಣಿ ಕಾಮೇಶ್ವರ ಅಂಬಿಗ
   ವಾಸಃ ಅಳ್ವೇಕೋಡಿ ಕುಮಟಾ
2. ರಾಮರಾಯ ನಾರಾಯಣ ಅಂಬಿಗ
   ವಾಸಃ ಕೋಡ್ಕಣಿ, ಕುಮಟಾ
3. ನಾಗರಾಜ ನಾರಾಯಣ ನಾಯ್ಕ
   ವಾಸಃ ಕುಮಟಾ
4. ಶೀತಲ ನಾರಾಯಣ ಬಾಂದೇಕರ
   ವಾಸಃ ಕುಮಟಾ
5. ಮಹೇಶ ಶಿವಾನಂದ ಮೇಸ್ತ
   ವಾಸಃ ಹೊನ್ನಾವರ

ಮೇಲೆ ಆಪಾದಿಸುವುದೇನೆಂದರೆ,

ಕುಮಟಾ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ನಾಗದೇವಿ ರಸ್ತೆ ಕುಮಟಾದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಕೂಡಿಕೊಂಡು ಮೋಸ ಮಾಡುವ ಉದ್ದೇಶದಿಂದ ಫಿರ್ಯಾದಿಯವರ ತಂಗಿಯವರಿಗೆ, ಸಾಕ್ಷಿದಾರ 18 ರಿಂದ 21, 23, 31, 35 ರಿಂದ 37 ರವರಿಗೆ ಸರಕಾರಿ ನೌಕರಿ ಕೊಡಿಸುತ್ತೇನೆ ಅಂತಾ ಹೇಳಿ ಬಂಗಾರದ ಆಭರಣ ಹಾಗೂ ನಗದು ಹಣವನ್ನು ಪಡೆದುಕೊಂಡಿದ್ದಲ್ಲದೇ, ಸಮಾರಂಭಕ್ಕೆ ಹೋಗಿ ಬರಲು ಸಾಕ್ಷಿದಾರ 27, 29, 30, 32, 33 ನೇಯವರ ಬಂಗಾರದ ಆಭರಣಗಳನ್ನು ಪಡೆದುಕೊಂಡು ವಾಪಸ್ಸು ತಂದು ಕೊಡುತ್ತೇನೆ ಅಂತಾ ನಂಬಿಸಿ ನಿಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಸದ್ರಿ ಆಭರಣಗಳನ್ನು ಮಣಪ್ಪುರಂ ಹಾಗೂ ಪಿನಕಾರ್ಫ ಬ್ಯಾಂಕಗಳ ಮಾನೇಜರ್ ರಾದ 3 ರಿಂದ 5 ನೇ ಆರೋಪಿತರಾದ ನಿಮ್ಮ ಬ್ಯಾಂಕಿನಲ್ಲಿ ಅಡಾವೆ ಇಡಲು ಬಂದಾಗ ನೀವು ಸದ್ರಿ ಬಂಗಾರದ ಆಭರಣ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿ ಪಡೆದುಕೊಂಡ ಆಭರಣಗಳನ್ನು ಅಡಾವೆ ಇಟ್ಟುಕೊಂಡಿದ್ದು, ಸಾಕ್ಷಿದಾರ 34 ನೇಯವರಿಗೆ 1 ಮತ್ತು 2 ನೇ ಆರೋತಪಿರಾದ ನೀವು ಬಂಗಾರದ ಆಭರಣಗಳು ತಮ್ಮದೇ ಅಂತಾ ಹೇಳಿ ಕೊಟ್ಟು 50 ಸಾವಿರ ರೂಪಾಯಿ ನಗದು ಹಣವನ್ನು

ಪಡೆದುಕೊಂಡು ನಂಬಿಸಿ ಮೋಸಪಡಿಸಿದ್ದಲ್ಲದೇ, ಸಾಕ್ಷಿದಾರ 39 ರಿಂದ 41 ನೇಯವರಿಗೆ ಸರಕಾರಿ ನೌಕರಿ ಕೊಡಿಸುವ ಸಲುವಾಗಿ ಕೊಟ್ಟ ಹಣಕ್ಕಾಗಿ ಸ್ಯೂರಿಟಿ ಸಲುವಾಗಿ 1 ನೇ ಆರೋಪಿಯಾದ ನೀವು ಸಾಕ್ಷಿದಾರ 19 ಮತ್ತು 20 ನೇಯವರಿಗೆ ಸಂಬಂಧಿಸಿದ ಚೆಕ್ ನ್ನು ನಿಮ್ಮದೇ ಖಾತೆಯ ಬ್ಯಾಂಕಿನ ಚೆಕ್ ಅಂತಾ ನಂಬಿಸಿ ಕೆಲವು ಚೆಕ್ ಗಳಲ್ಲಿ ನಗದು ಬರೆದು ಕೊಟ್ಟು ಮೋಸ ಪಡಿಸಿದ್ದಲ್ಲದೇ, ನಿಮಗೆ ಹಣದ ಅವಶ್ಯಕತೆ ಇದೆ ಎಂದು ಸಾಕ್ಷಿದಾರ 38 ಮತ್ತು 42 ನೇಯವರಿಂದ ಹಣವನ್ನು ಪಡೆದುಕೊಂಡು ಸ್ಯೂರಿಟಿಯಾಗಿ ಸಾಕ್ಷಿದಾರ 19 ನೇಯವರಿಗೆ ಸಂಬಂಧಿಸಿದ ಚೆಕ್ ಗಳನ್ನು ನಿಮ್ಮದೇ ಬ್ಯಾಂಕಿನ ಖಾತೆಯ ಚೆಕ್ ಗಳು ಅಂತ ನಂಬಿಸಿ ಚೆಕ್ ನಲ್ಲಿ ನಗದು ಬರೆದುಕೊಟ್ಟು ಮೋಸ ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **403 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

1 ಮತ್ತು 2 ನೇ ಆರೋಪಿತರಾದ ನೀವು ಕೂಡಿಕೊಂಡು ಮೋಸ ಮಾಡುವ ಉದ್ದೇಶದಿಂದ ಫಿರ್ಯಾದಿಯವರ ತಂಗಿಯವರಿಗೆ, ಸಾಕ್ಷಿದಾರ 18 ರಿಂದ 21, 23, 31, 35 ರಿಂದ 37 ರವರಿಗೆ ಸರಕಾರಿ ನೌಕರಿ ಕೊಡಿಸುತ್ತೇನೆ ಅಂತಾ ಹೇಳಿ ಬಂಗಾರದ ಆಭರಣ ಹಾಗೂ ನಗದು ಹಣವನ್ನು ಪಡೆದುಕೊಂಡಿದ್ದಲ್ಲದೇ, ಸಾಕ್ಷಿದಾರ 27, 29, 30, 32, 33 ನೇಯವರ ಬಂಗಾರದ ಆಭರಣಗಳನ್ನು ಪಡೆದುಕೊಂಡು ವಾಪಸ್ಸು ತಂದು ಕೊಡುತ್ತೇನೆ ಅಂತಾ ನಂಬಿಸಿ ನಿಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಸದ್ರಿ ಆಭರಣಗಳನ್ನು ಮಣಪ್ಪುರಂ ಹಾಗೂ ಪಿನಕಾರ್ಪ ಬ್ಯಾಂಕಗಳ ಮಾನೇಜರ್ ರಾದ 3 ರಿಂದ 5 ನೇ ಆರೋಪಿತರಾದ ನಿಮ್ಮ ಬ್ಯಾಂಕಿನಲ್ಲಿ ಅಡಾವೆ ಇಡಲು ಬಂದಾಗ ನೀವು ಸದ್ರಿ ಬಂಗಾರದ ಆಭರಣ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿ ಪಡೊಕೊಂಡ ಆಭರಣ ಅಂತಾ ಗೊತ್ತಿದ್ದರೂ ಸಹ ಅಡಾವೆ ಇಟ್ಟುಕೊಂಡಿದ್ದು, ಸಾಕ್ಷಿದಾರ 34 ನೇಯವರಿಗೆ 1 ಮತ್ತು 2 ನೇ ಆರೋತಪಿರಾದ ನೀವು ಬಂಗಾರದ ಆಭರಣಗಳು ತಮ್ಮದೇ ಅಂತಾ ಹೇಳಿ ಕೊಟ್ಟು 50 ಸಾವಿರ ರೂಪಾಯಿ ನಗದು ಹಣವನ್ನು ಪಡೆದುಕೊಂಡು ನಂಬಿಸಿ ಮೋಸಪಡಿಸಿದ್ದಲ್ಲದೇ, ಸ್ಯೂರಿಟಿ ಸಲುವಾಗಿ 1 ನೇ ಆರೋಪಿಯಾದ ನೀವು ಸಾಕ್ಷಿದಾರ 19 ಮತ್ತು 20 ನೇಯವರಿಗೆ ಸಂಬಂಧಿಸಿದ ಚೆಕ್ ನ್ನು ನಿಮ್ಮದೇ ಖಾತೆಯ ಬ್ಯಾಂಕಿನ ಚೆಕ್ ಅಂತಾ ನಂಬಿಸಿ ಕೆಲವು ಚೆಕ್ ಗಳಲ್ಲಿ ನಗದು ಬರೆದು ಕೊಟ್ಟು ಮೋಸ ಪಡಿಸಿದ್ದಲ್ಲದೇ, ನೀವು ಸ್ಯೂರಿಟಿಯಾಗಿ ಸಾಕ್ಷಿದಾರ 19 ನೇಯವರಿಗೆ ಸಂಬಂಧಿಸಿದ ಚೆಕ್ ಗಳನ್ನು ನಿಮ್ಮದೇ ಬ್ಯಾಂಕಿನ ಖಾತೆಯ ಚೆಕ್ ಗಳು ಅಂತ ನಂಬಿಸಿ ಚೆಕ್ ನಲ್ಲಿ ನಗದು ಬರೆದುಕೊಟ್ಟು ಮೋಸ ಹಾಗೂ ನಂಬಿಕೆ ದ್ರೋಹ ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **406 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

1 ಮತ್ತು 2 ನೇ ಆರೋಪಿತರಾದ ನೀವು ಕೂಡಿಕೊಂಡು ಮೋಸ ಮಾಡುವ ಉದ್ದೇಶದಿಂದ ಫಿರ್ಯಾದಿಯವರ ತಂಗಿಯವರಿಗೆ, ಸಾಕ್ಷಿದಾರ 18 ರಿಂದ 21, 23, 31, 35 ರಿಂದ 37 ರವರಿಗೆ ಸರಕಾರಿ ನೌಕರಿ ಕೊಡಿಸುತ್ತೇನೆ ಅಂತಾ ಸುಳ್ಳು ಹೇಳಿ ಬಂಗಾರದ ಆಭರಣ ಹಾಗೂ ನಗದು ಹಣವನ್ನು ಪಡೆದುಕೊಂಡಿದ್ದಲ್ಲದೇ,ಸಾಕ್ಷಿದಾರ 27, 29, 30, 32, 33 ನೇಯವರ ಬಂಗಾರದ ಆಭರಣಗಳನ್ನು ಪಡೆದುಕೊಂಡು ವಾಪಸ್ಸು ತಂದು ಕೊಡುತ್ತೇನೆ ಅಂತಾ ಸುಳ್ಳು ಹೇಳಿ ನಿಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದು, ಸದ್ರಿ ಬಂಗಾರದ ಆಭರಣಗಳನ್ನು 3 ರಿಂದ 5 ನೇ ಆರೋಪಿತರಾದ ನಿಮ್ಮ

ಬ್ಯಾಂಕಿನಲ್ಲಿ ಅಡಾವೆ ಇಟ್ಟಿದ್ದು, ಸಾಕ್ಷಿದಾರ 34 ನೇಯವರಿಗೆ 1 ಮತ್ತು 2 ನೇ ಆರೋತಪಿರಾದ ನೀವು ಬಂಗಾರದ ಆಭರಣಗಳು ತಮ್ಮದೇ ಅಂತಾ ಸುಳ್ಳು ಹೇಳಿ ಕೊಟ್ಟು 50 ಸಾವಿರ ರೂಪಾಯಿ ನಗದು ಹಣವನ್ನು ಪಡೆದುಕೊಂಡಿದ್ದಲ್ಲದೇ, 1 ನೇ ಆರೋಪಿಯಾದ ನೀವು ಸಾಕ್ಷಿದಾರ 19 ಮತ್ತು 20 ನೇಯವರಿಗೆ ಸಂಬಂಧಿಸಿದ ಚೆಕ್ ನ್ನು ನಿಮ್ಮದೇ ಖಾತೆಯ ಬ್ಯಾಂಕಿನ ಚೆಕ್ ಅಂತಾ ಸುಳ್ಳು ಹೇಳಿ ಕೆಲವು ಚೆಕ್ ಗಳಲ್ಲಿ ನಗದು ಬರೆದು ಕೊಟ್ಟು ಮೋಸ ಪಡಿಸಿದ್ದಲ್ಲದೇ, 1 ಮತ್ತು 2 ನೇ ಆರೋಪಿತರಾದ ನೀವು ಸ್ಯೂರಿಟಿಯಾಗಿ ಸಾಕ್ಷಿದಾರ 19 ನೇಯವರಿಗೆ ಸಂಬಂಧಿಸಿದ ಚೆಕ್ ಗಳನ್ನು ನಿಮ್ಮದೇ ಬ್ಯಾಂಕಿನ ಖಾತೆಯ ಚೆಕ್ ಗಳು  ಅಂತ ನಂಬಿಸಿ ಸುಳ್ಳು ಹೇಳಿ ಚೆಕ್ ನಲ್ಲಿ ನಗದು ಬರೆದುಕೊಟ್ಟು ಮೋಸ ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **201 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

1 ಮತ್ತು 2 ನೇ ಆರೋಪಿತರಾದ ನೀವು ಕೂಡಿಕೊಂಡು ಒಳ ಸಂಚು ರೂಪಿಸಿ ಮೋಸ ಮಾಡುವ ಉದ್ದೇಶದಿಂದ ಫಿರ್ಯಾದಿಯವರ ತಂಗಿಯವರಿಗೆ, ಸಾಕ್ಷಿದಾರ 18 ರಿಂದ 21, 23, 31, 35 ರಿಂದ 37 ರವರಿಗೆ ಸರಕಾರಿ ನೌಕರಿ ಕೊಡಿಸುತ್ತೇನೆ ಅಂತಾ ಸುಳ್ಳು ಹೇಳಿ ಬಂಗಾರದ ಆಭರಣ ಹಾಗೂ ನಗದು ಹಣವನ್ನು ಹಾಗೂ ಸಾಕ್ಷಿದಾರ 27, 29, 30, 32, 33 ನೇಯವರ ಬಂಗಾರದ ಆಭರಣಗಳನ್ನು ಪಡೆದುಕೊಂಡಿದ್ದಲ್ಲದೇ ಸದ್ರಿ ಬಂಗಾರದ ಆಭರಣಗಳನ್ನು 3 ರಿಂದ 5 ನೇ ಆರೋಪಿತರಾದ ನಿಮ್ಮ ಬ್ಯಾಂಕಿನಲ್ಲಿ ಅಡಾವೆ ಇಟ್ಟಿದ್ದಲ್ಲದೇ, ಸಾಕ್ಷಿದಾರ 34 ನೇಯವರಿಗೆ 1 ಮತ್ತು 2 ನೇ ಆರೋತಪಿರಾದ ನೀವು ಬಂಗಾರದ ಆಭರಣಗಳು ತಮ್ಮದೇ ಅಂತಾ ಸುಳ್ಳು ಹೇಳಿ ಕೊಟ್ಟು 50 ಸಾವಿರ ರೂಪಾಯಿ ನಗದು ಹಣವನ್ನು ಪಡೆದುಕೊಂಡಿದ್ದಲ್ಲದೇ, ಸ್ಯೂರಿಟಿ ಸಲುವಾಗಿ 1 ನೇ ಆರೋಪಿಯಾದ ನೀವು ಸಾಕ್ಷಿದಾರ 19 ಮತ್ತು 20 ನೇಯವರಿಗೆ ಸಂಬಂಧಿಸಿದ ಚೆಕ್ ನ್ನು ನಿಮ್ಮದೇ ಖಾತೆಯ ಬ್ಯಾಂಕಿನ ಚೆಕ್ ಅಂತಾ ಸುಳ್ಳು ಹೇಳಿ ಕೊಟ್ಟಿದ್ದಲ್ಲದೇ, ಸಾಕ್ಷಿದಾರ 19 ನೇಯವರಿಗೆ ಸಂಬಂಧಿಸಿದ ಚೆಕ್ ಗಳನ್ನು ನಿಮ್ಮದೇ ಬ್ಯಾಂಕಿನ ಖಾತೆಯ ಚೆಕ್ ಗಳು  ಅಂತಾ ಹೇಳಿ ಮೋಸ ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 1**20(ಬಿ) ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಮಣಪ್ಪುರಂ ಹಾಗೂ ಪಿನಕಾರ್ಪ ಬ್ಯಾಂಕಗಳ ಮಾನೇಜರ್ ರಾದ 3 ರಿಂದ 5 ನೇ ಆರೋಪಿತರಾದ ನೀವು ನಿಮ್ಮ ಬ್ಯಾಂಕಿನಲ್ಲಿ 1 ಮತ್ತು 2 ನೇ ಆರೋಪಿತರು ಮೋಸ ಹಾಗೂ ನಂಬಿಕೆ ದ್ರೋಹ ಮಾಡಿ ಪಡೆದುಕೊಂಡ ಬಂಗಾರದ ಆಭರಣಗಳನ್ನು ಅಡಾವೆ ಇಡಲು ಬಂದಾಗ ನೀವು ಸದ್ರಿ ಬಂಗಾರದ ಆಭರಣಗಳ ಮಾಲೀಕರು ಯಾರು ಎಂದು ತಿಳಿದುಕೊಳ್ಳದೇ ಆರ್ ಬಿಆಯ್ ನಿಯಮವನ್ನು ಪಾಲಿಸದೇ ಸದ್ರಿ ಬಂಗಾರದ ಆಭರಣ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿ ಪಡೊಕೊಂಡ ಆಭರಣ ಅಂತಾ ಗೊತ್ತಿದ್ದರೂ ಸಹ ಅಡಾವೆ ಇಟ್ಟುಕೊಂಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **411 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

1 ಮತ್ತು 2 ನೇ ಆರೋಪಿತರಾದ ನೀವು ಕೂಡಿಕೊಂಡು ಒಳ ಸಂಚು ರೂಪಿಸಿ ಮೋಸ ಮಾಡುವ ಉದ್ದೇಶದಿಂದ ಫಿರ್ಯಾದಿಯವರ ತಂಗಿಯವರಿಗೆ, ಸಾಕ್ಷಿದಾರ 18 ರಿಂದ 21, 23, 31, 35 ರಿಂದ

37 ರವರಿಗೆ ಸರಕಾರಿ ನೌಕರಿ ಕೊಡಿಸುತ್ತೇನೆ ಅಂತಾ ಸುಳ್ಳು ಹೇಳಿ ಬಂಗಾರದ ಆಭರಣ ಹಾಗೂ ನಗದು ಹಣವನ್ನು ಹಾಗೂ ಸಾಕ್ಷಿದಾರ 27, 29, 30, 32, 33 ನೇಯವರ ಬಂಗಾರದ ಆಭರಣಗಳನ್ನು ಪಡೆದುಕೊಂಡಿದ್ದಲ್ಲದೇ ಸದ್ರಿ ಬಂಗಾರದ ಆಭರಣಗಳನ್ನು 3 ರಿಂದ 5 ನೇ ಆರೋಪಿತರಾದ ನಿಮ್ಮ ಬ್ಯಾಂಕಿನಲ್ಲಿ ಅಡಾವೆ ಇಟ್ಟಿದ್ದಲ್ಲದೇ, ಸಾಕ್ಷಿದಾರ 34 ನೇಯವರಿಗೆ ಬಂಗಾರದ ಆಭರಣಗಳು ನಿಮ್ಮದೇ ಅಂತಾ ಸುಳ್ಳು ಹೇಳಿ ಕೊಟ್ಟು 50 ಸಾವಿರ ರೂಪಾಯಿ ನಗದು ಹಣವನ್ನು ಪಡೆದುಕೊಂಡಿದ್ದಲ್ಲದೇ, ಸ್ಯೂರಿಟಿ ಸಲುವಾಗಿ 1 ನೇ ಆರೋಪಿಯಾದ ನೀವು ಸಾಕ್ಷಿದಾರ 19 ಮತ್ತು 20 ನೇಯವರಿಗೆ ಸಂಬಂಧಿಸಿದ ಚೆಕ್ ನ್ನು ನಿಮ್ಮದೇ ಖಾತೆಯ ಬ್ಯಾಂಕಿನ ಚೆಕ್ ಅಂತಾ ಸುಳ್ಳು ಹೇಳಿ ಕೊಟ್ಟು ಮೋಸ ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ **420 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಈ ನ್ಯಾಯಾಲಯದ ಸಂಜ್ಞೇಯಕ್ಕೆ ಒಳಪಟ್ಟಿರುತ್ತೀರಿ.

ಸದ್ರಿ ಅಪಾದನೆಯ ಅಧಿವಿಚಾರಣೆಯು ನಿಮ್ಮ ವಿರುದ್ಧ ನನ್ನ ಮುಂದೆ ಜರುಗತ್ತದೆಂದು ನಾನು ನಿರ್ದೇಶಿಸುತ್ತೇನೆ .

ದಿನಾಂಕ ಃ28.2.2022

Sd/-

( **ನರೇಂದ್ರ ಬಿ ಆರ್,** )

**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**

**ಕುಮಟಾ**